**ಬಿತ್ತನೆ ನಿಧಾನವಾದಷ್ಟೂ ಕುಯಿಲು ನಿಧಾನವಾಗುತ್ತದೆ. ಚಳಿಗಾಲ ಬೇಗ ಆರಂಭವಾಗುವುದರಿಂದ ತೆನೆಯಲ್ಲಿ ಸರಿಯಾಗಿ ಕಾಳುಕಟ್ಟದೆ ಜೊಳ್ಳಾಗುತ್ತಿವೆ. ಇದರಿಂದ ಇಳುವರಿ ಗಣನೀಯವಾಗಿ ಕುಸಿಯುತ್ತಿದೆ.**

ಹೀಗೆ ಮನೆ ಮನೆ ಭೇಟಿ ಮಾಡುವಾಗ ಕುತೂಹಲಕಾರಿ ಅಂಶವೊಂದಿದೆ. ಪ್ರತಿಯೊಂದು ಮಳೆಯೂ ಒಂದೊಂದು ಜನಾಂಗದ ಮನೆಯಲ್ಲಿ ವಾಸವಾಗಿರುತ್ತದೆ ಎಂಬ ನಂಬಿಕೆ: ಉದಾಹರಣೆಗೆ ಅಶ್ವಿನಿಯು ಹೂಗಾರರ ಮನೆ, ಕೃತ್ತಿಕೆಯು ತಳವಾರರ ಮನೆ, ಭರಣಿಯು ಅಗಸರ ಮನೆ, ರೋಹಿಣಿಯು ಬಣಜಿಗರ ಮನೆ, ಮೃಗಶಿರವು ಕ್ಷ್ವಾಮಟರ (ವೈಶ್ಯ) ಮನೆಯಲ್ಲಿ ವಾಸವಾಗಿರುತ್ತದಂತೆ. ಯುವಕರ ಗುಂಪು ಅವರ ಮನೆಗಳ ಮುಂದೆ ಹೋಗಿ ಮತ್ತದೇ ಹಾಡನ್ನು ಪುನರಾವರ್ತಿಸುತ್ತಾರೆ. ಆ ಮನೆಯವರು ಬೈಯುತ್ತಾ ಇವರಿಗೆ ಭಿಕ್ಷೆ ಹಾಕಲು ಹೊರಗೆ ಬಂದು, ಮತ್ತೆ ಒಳಹೋಗುವಾಗ ನೀರು ತುಂಬಿದ ಗಡಿಗೆಯನ್ನು ದೊಪ್ಪನೆ ಎತ್ತಿ ಹಾಕಿ ಓಡಿಹೋಗುತ್ತಾರೆ. ತಲೆಯ ಮೇಲೆ ಕಪ್ಪೆಯನ್ನು ಹೊತ್ತು ನೀರು ಸುರಿದುಕೊಳ್ಳುತ್ತಾ ಬೀದಿಬೀದಿ ತಿರುಗಿ ಭಿಕ್ಷೆ ಬೇಡುವ 'ಗುರ್ಜಿ' ಕೂಡ ಮಳೆ ಹಬ್ಬವೇ.

ದಕ್ಷಿಣ ಕರ್ನಾಟಕದಲ್ಲಿ ಜೇಡಿಮಣ್ಣಿನ ಮಳೆರಾಯನ ಬೊಂಬೆ ಮಾಡಿ, ಅರಿಷಿಣ ಕುಂಕುಮ, ಕಾಡುಹೂಗಳಿಂದ ಸಿಂಗರಿಸಿ ತಲೆಮೇಲೆ ಹೊತ್ತು 'ಬಾರಪ್ಪೋ ಮಳೆರಾಯ, ನೀ ಬಂದಾರೆ ಬಲು ಚೆನ್ನ. ಕುಡಿಯಲೂ ನೀರಿಲ್ಲ. ಕೆರೆಕುಂಟೇಲಿ ಹನಿಯಿಲ್ಲ' ಎಂದು ಹಾಡುತ್ತಾ ಊರಬೀದಿಗಳಲ್ಲಿ ಸುತ್ತು ಬರುತ್ತಾರೆ. ಪ್ರತಿ ಮನೆಯವರೂ ಮಳೆರಾಯನ ಹೊತ್ತವನ ಮೇಲೆ ಕೊಡ ನೀರು ಸುರಿಯುತ್ತಾರೆ. ಹೀಗೆ ಮಾಡಿದರೆ ಮಳೆ ಬರುವುದೆಂಬ ನಂಬಿಕೆ. ಯುಗಾದಿಯ ದಿನ ಚಂದ್ರನ ಕೋಡು ಹೆಚ್ಚು ಬಾಗಿದ ದಿಕ್ಕಿಗೆ ಮಳೆ ಬೆಳೆ ಸಮೃದ್ಧಿಯಾಗುತ್ತದೆ ಎಂಬ ನಂಬಿಕೆಯೂ ಇದೆ.

'ಬಹುಪಾಲು ಕೃಷಿ ಆಚರಣೆಗಳು ಮಳೆ ಮತ್ತು ನೆಲದ ಫಲವಂತಿಕೆಯ ಸುತ್ತಲೇ ರೂಪುಗೊಂಡಿರುವಂತವು. ಜನಸಾಮಾನ್ಯರ ಅನುಭವದಿಂದ ರೂಪುಗೊಂಡ ಈ ಆಚರಣೆಗಳು ನಮ್ಮ ಕೃಷಿ ಸಂಸ್ಕೃತಿಯ ಹೆಮ್ಮೆ. ಬದಲಾದ ವಾತಾವರಣದ ಹಿನ್ನೆಲೆಯಲ್ಲಿ ಇವುಗಳನ್ನು ಮತ್ತೊಮ್ಮೆ ಒರೆಗಚ್ಚಿ ನೋಡಬೇಕಾದ ಅಗತ್ಯವಿದೆ' ಎಂದು ಕೃಷಿ ಬರಹಗಾರ ಮಲ್ಲಿಕಾರ್ಜುನ ಹೊಸಪಾಳ್ಯ ಅಭಿಪ್ರಾಯ ಪಡುತ್ತಾರೆ.

### ಕೈಕೊಡುತ್ತಿರುವ ಮುಂಗಾರು

ಮುಂಗಾರು ಮಳೆ ಮೇ ಕೊನೆಗೆ ಅಥವಾ ಜೂನ್ ಮೊದಲ ವಾರದಿಂದ ಪ್ರಾರಂಭಿಸಿ ಒಂದೂವರೆ ತಿಂಗಳಿರುವುದು. ಆಮೇಲೆ ಎರಡು ತಿಂಗಳು ಹೈನು ಮಳೆ ಎನ್ನಿಸಿಕೊಳ್ಳುವುದು. ಅನಂತರ ನವೆಂಬರ್ ಕೊನೆವರೆಗೆ ಹಿಂಗಾರು. ಮುಂದಿನದು ಗ್ಯಾರಂಟಿ ಇಲ್ಲದ ಬೇಸಿಗೆ ಮಳೆ.

'ಯುಗಾದಿಯ ನಂತರ ಮಾಗಿ ಉಳುಮೆ ಮಾಡಲು ಅನುಕೂಲವಾಗುವ ಹಾಗೆ ಮಣ್ಣು ನೆನೆಯಲು ಸಾಕಾಗುವಷ್ಟು ಮಳೆ ಬೀಳಬೇಕು. ಆಮೇಲೆ ಸುಗ್ಗಿ ಕಾಲದವರೆಗೆ ಪೈರುಗಳು ಚೆನ್ನಾಗಿ ಬೆಳೆಯುವ ಹಾಗೆ ಸೋನೆ ಮಳೆ ಬರಬೇಕು. ಒಂದೇ ಆವೃತ್ತಿ ದೊಡ್ಡ ಮಳೆ ಬಂದು ನಾಲ್ಕೈದು ವಾರಗಳವರೆಗೆ ಮಳೆ ಬಾರದಿದ್ದರೆ ಪ್ರಯೋಜನವಿಲ್ಲ. ಸುಗ್ಗಿ ಕಾಲಕ್ಕೆ, ಪೈರುಗಳು ಹೂ ಬಿಟ್ಟು ಕಾಳಾಗುವ ಸಮಯದಲ್ಲಿ ಮಳೆ ಇಲ್ಲದಿದ್ದರೆ ಒಳ್ಳೆಯದು. ಮಳೆಯು ಬಹಳ ಕೊಂಚವಾಗಿಯೂ ಬಹಳ ಬಿರುಸಾಗಿಯೂ ಬೀಳಕೂಡದು. ಬಿರುಮಳೆ ಸುರಿದರೆ ಭೂಮಿಯಲ್ಲಿ ಇಂಗುವುದಕ್ಕೆ ಅವಕಾಶವಿಲ್ಲದೆ ನೀರು ವ್ಯರ್ಥವಾಗಿ ಮಣ್ಣಿನ



**ಇಳೆಯೇ ಬೊಗಸೆಯೊಡ್ಡಿ ಮಳೆಹನಿಯ ಮೊಗೆಯುತಿದೆ...**
ಕರಾವಳಿಯಲ್ಲಿ ಮಳೆಗಾಲವೆಂದರೆ ದೋಣಿಗಳಿಗೆ ರಜದ ಮಜ. ನೀರಲ್ಲಿ ತೇಲುತ್ತ ಮೀನುಗಾರರ ಜೀವ–ಜೀವನವನ್ನು ಪೊರೆಯುವ ಅವುಗಳಿಗೆ ಮಳೆಗಾಲದಲ್ಲಿ ದಡದಲ್ಲಿ ನಿಂತು ಸುರಿವ ಹನಿಗಳಿಗೆ ಮೈಯೊಡ್ಡಿ ಸಂದು ಸಂದುಗಳಲ್ಲಿ ಹಸಿರು ಚಿಗುರಿಸಿಕೊಳ್ಳುವ ಸಂಭ್ರಮ. ಆದರೆ ಈ ವರ್ಷ ಇನ್ನೂ ಮಳೆಯ ಸುಳಿವಿಲ್ಲ. ದಡದ ಮೇಲೆ ಬಿರುಬಿಸಿಲಿಗೆ ಮೈಸೆಟೆದುಕೊಂಡು ನಿಂತ ದೋಣಿಗಳು ಬಾಯಾರಿದ ಭೂಮಿಯ ತೆರೆದ ಬಾಯಿಯಂತೆ ಕಾಣುತ್ತಿವೆ.